**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 01–12–2016 ರಂದು ಸಂಜೆ 4:30ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:–**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
5. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು.
6. ಡಾ॥ ಸುನೀಲ್ ಪಂವಾರ್, ಕಾರ್ಯದರ್ಶಿ.
7. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ.

ಶ್ರೀ ಎಲ್. ಕೃಷ್ಣಮೂರ್ತಿ, ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಸಭೆಗೆ ಎಲ್ಲರನ್ನೂ ಸ್ವಾಗತಿಸಿದರು.

**ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:–**

**1) ಅನುಪಾಲನಾ ವರದಿ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 07–09–2016ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಕಾರ್ಯದರ್ಶಿಯವರು ಸಭೆಗೆ ಒಪ್ಪಿಸಿದರು.

**2) ಆಯೋಗದ 2015–16ನೇ ಸಾಲಿನ ಆಡಳಿತ ವರದಿ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗದ 2015–16ನೇ ಸಾಲಿನ ಆಡಳಿತ ವರದಿಯ ಕರಡು ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು. ಈ ಬಾರಿ ಆಯೋಗ ಹೊರತಂದಿರುವ ಶಿಫಾರಸ್ಸುಗಳ ಬಗ್ಗೆ ಸಭೆ ಕೂಲಂಕುಷವಾಗಿ ಚರ್ಚಿಸಿ ಅದಕ್ಕೆ ಪೂರ್ಣ ಅನುಮತಿಯನ್ನು ನೀಡುತ್ತಾ, ಆದಷ್ಟುಬೇಗ ಇದರ ಮುದ್ರಣ ಕಾರ್ಯ ಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

**3) ಆಯೋಗದ ನೂತನ ಕಟ್ಟಡದ ಪ್ರಗತಿ ಬಗ್ಗೆ.**

ಆಯೋಗದ ನೂತನ ಕಟ್ಟಡದ ಪ್ರಗತಿಯನ್ನು ಮಾನ್ಯ ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು ಹಾಗೂ ಇತನ್ಮಧ್ಯೆ ಈ ಹಿಂದೆ ತಿಳಿಸಿದಂತೆ ನೂತನ ಕಟ್ಟಡದಲ್ಲಿ ನ್ಯಾಯಾಲಯ ಸಭಾಂಗಣದಲ್ಲಿ ನಿರ್ಮಿಸಬೇಕಾದ Glass partition wallನ್ನು ಅಳವಡಿಸುವುದು ಸೂಕ್ತವಲ್ಲ ಎಂದು ಸಭೆ ತೀರ್ಮಾನಿಸಿ ಮುಖ್ಯ ಅಭಿಯಂತರರಿಗೆ ಪತ್ರಿಸಬೇಕೆಂದು ಹಾಗೂ ನೂತನ ಕಟ್ಟಡವನ್ನು ಜನವರಿ–2017ರ ಒಳಗೆ ಆಯೋಗದ ವಶಕ್ಕೆ ನೀಡಬೇಕೆಂದು ಕೋರುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ನೂತನ ಕಟ್ಟಡಕ್ಕೆ **"ಮಾಹಿತಿ ಸೌಧ"** ಎಂದು ನಾಮಾಂಕಿತ ನೀಡಲು ಸರ್ಕಾರದಿಂದ ಅನುಮತಿಪಡೆದುಕೊಳ್ಳಲು ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು ಹಾಗೂ ಮುಂದೆ ನಡೆಯುವ ಉದ್ಘಾಟನಾ ಸಮಾರಂಭಕ್ಕೆ ಗಣ್ಯಾತಿಗಣ್ಯರನ್ನು ಆಹ್ವಾನಿಸುವ ಸಂಪೂರ್ಣ ಜವಾಬ್ದಾರಿಯನ್ನು ಸಭೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಇವರಿಗೆ ನೀಡಿತು.

ಕ್ರಮ: ಕಾರ್ಯದರ್ಶಿ

**3) ಆಯೋಗದ ತುರ್ತು ಕಾರ್ಯಗಳಿಗೆ ನೆರವಾಗುವಂತೆ ಒಂದು ದ್ವಿಚಕ್ರ ವಾಹನ ಖರೀದಿಯ ಬಗ್ಗೆ.**

ಆಯೋಗದ ತುರ್ತು ಕಾರ್ಯಗಳು ಸುಗಮವಾಗಿ ನಡೆಯಲು ದ್ವಿಚಕ್ರ ವಾಹನವನ್ನು ಖರೀದಿಸುವ ಕಾರಣವನ್ನು ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು. ಸಭೆ ತನ್ನ ಪೂರ್ಣ ಸಹಮತಿಯನ್ನು ಸೂಚಿಸಿತು.

ಈ ದ್ವಿಚಕ್ರ ವಾಹನವನ್ನು ಯಾರಾದರೂ ಒಬ್ಬ ನೌಕರನ ಜವಾಬ್ದಾರಿಗೆ ನೀಡಿ ಅವರಿಂದ ವಾಹನದ ಸುರಕ್ಷತೆಯ ಜೊತೆಗೆ ಜವಾಬ್ದಾರಿಯನ್ನುವಹಿಸುವುದಲ್ಲದೆ ದ್ವಿಚಕ್ರ ಚಲಾಯಿಸುವ ನೌಕರರಿಗೆ ಕಡ್ಡಾಯವಾಗಿ ಡಿಎಲ್ ಇರುವುದರ ಬಗ್ಗೆ ದೃಢೀಕೃತ ಮಾಹಿತಿಯನ್ನು ಪಡೆದು ಲಾಗ್‌ಬುಕ್ ಇಡುವಂತೆ ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

4) **ಆಯೋಗದ ಅಧೀನ ಕಾರ್ಯದರ್ಶಿಯವರ ಹೆಸರಿನಲ್ಲಿ ಡಿಜಿಟಲ್ ಕೀ ಆಧರಿಸಿ ಸಮನ್ಸ್‌ಗಳನ್ನು ಜಾರಿ ಮಾಡುವ ಬಗ್ಗೆ.**

ಆಯೋಗದ ಅಧೀನ ಕಾರ್ಯದರ್ಶಿಯವರ ಹೆಸರಿನಲ್ಲಿ ಡಿಜಿಟಲ್ ಕೀ ಆಧರಿಸಿ ಸಮನ್ಸ್‌ಗಳನ್ನು ಜಾರಿ ಮಾಡುವ ಬಗ್ಗೆ ಸಭೆ ತನ್ನ ಸಹಮತಿಯನ್ನು ಸೂಚಿಸುತ್ತಾ, ಹೊಸ ವಿದ್ಯುನ್ಮಾನಗಳನ್ನು ಬಳಸಿ ಸಾರ್ವಜನಿಕರಿಗೆ ಸುಲಭವಾಗುವಂತೆ ಹಾಗೂ ನೆರವಾಗುವಂತೆ ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸಭೆ ಸೂಚಿಸುತ್ತಾ, ಯಾವುದೇ ಹೊಸ ತಂತ್ರಜ್ಞಾನ ಬಳಸುವುದು ಅತೀ ಸೂಕ್ತವೆಂದು ಪರಿಗಣಿಸಿ ಇದು ಕಾನೂನಿನ ಎಲ್ಲೆಯನ್ನು ಮೀರದಂತೆ ನೋಡಿಕೊಳ್ಳಲು ಹಾಗೂ ತತ್ಸಂಬಂಧ ಆದೇಶಗಳನ್ನು ಹೊರಡಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

5) **ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

1) **ಆಯೋಗದ ರಿಟೈನರ್‌ಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ.**

ಆಯೋಗದ ರಿಟೈನರ್‌ಗಳ ಅವಧಿಯನ್ನು ಅವರ ಕಾರ್ಯ ನಿರ್ವಹಣೆಯನ್ನು ಗಮನಿಸಿ 02 ವರ್ಷಗಳಿಗೆ, ಕೆಲವೊಂದು ಷರತ್ತುಗಳಿಗೆ ಒಳಪಟ್ಟು, ಮುಂದುವರಿಸಲು ಸಭೆ ಸಹಮತಿ ಸೂಚಿಸಿತು.

ಆಯೋಗದ ಪ್ರಕರಣಗಳನ್ನು ಧಾರವಾಡದ ಪೀಠದಲ್ಲಿ ಪ್ರತಿನಿಧಿಸುವಂತೆ, ಗುಲ್ಬರ್ಗಾ ಪೀಠದಲ್ಲಿಯೂ ಸಹ ಪ್ರತಿನಿಧಿಸಲು ವಕೀಲರನ್ನು ನೇಮಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

2) **ಒಂದೇ ಐಪಿಒದಲ್ಲಿ ಹಲವಾರು ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಬಂದಿರುವ ಅರ್ಜಿಗಳನ್ನು ಸ್ವೀಕೃತಿ ಹಂತದಲ್ಲಿ ಒಂದೇ ಪ್ರಕರಣವಾಗಿ ಪರಿಗಣಿಸುವ ಬಗ್ಗೆ.**

ಒಂದೇ ಐಪಿಒ ಅಡಿ ಹಲವಾರು ಮಾಹಿತಿ ಅಧಿಕಾರಿಗಳಿಗೆ ಕಲಂ 6(3)ರಡಿಯಲ್ಲಿ ವರ್ಗಾವಣೆಗೊಂಡಂತಹ ಪ್ರಕರಣಗಳನ್ನು ಒಂದೇ ನ್ಯಾಯಾಲಯ ಸಭಾಂಗಣಕ್ಕೆ ವರ್ಗಾಯಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸುತ್ತಾ, ವರ್ಗಾಯಿಸಿದ ನಂತರ ಸೂಕ್ತ ನಿರ್ಣಯವನ್ನು ಆಯುಕ್ತರುಗಳು ಕೈಗೊಳ್ಳುವಂತೆ ಸಭೆ ತೀರ್ಮಾನಿಸಿತು.

ಕ್ರಮ: ಕಾರ್ಯದರ್ಶಿ

3) **ಮಾಹಿತಿ ಆಯೋಗದಲ್ಲಿ ಸಾರ್ವಜನಿಕರಿಗೆ ಸೌಲಭ್ಯ ನೀಡುವ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ಈಗ ಕೈಗೊಳ್ಳುತ್ತಿರುವ ಸಾರ್ವಜನಿಕ ಸ್ನೇಹಿ ಕಾರ್ಯಗಳ ಜೊತೆಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವಂತೆ ಕ್ರಮಗಳನ್ನು ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸಭೆ ನಿರ್ದೇಶನ ನೀಡಿತು.

ಕ್ರಮ: ಕಾರ್ಯದರ್ಶಿ

3/12/2016

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)